RNI No. KARBIL/2001/47147

# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

| | | |
|---|---|---|
| ಭಾಗ - IV-A | ಬೆಂಗಳೂರು, ಶುಕ್ರವಾರ, ಜನವರಿ ೩೧, ೨೦೧೪ (ಮಾಘ ೧೧, ಶಕ ವರ್ಷ ೧೯೩೫) | ನಂ. ೭೪ |
| Part - IV-A | Bangalore, Friday, January 31, 2014 (Magha 11, Shaka Varsha 1935) | No. 74 |

## ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವಾಲಯ

### ಅಧಿಸೂಚನೆ

**ಸಂಖ್ಯೆ: ಗ್ರಾಅಪ 299 ಪಬವ 2013, ಬೆಂಗಳೂರು, ದಿನಾಂಕ: 30-01-2014**

ಕರ್ನಾಟಕ ಸಾಮಾನ್ಯ ಸೇವೆ (ಅಭಿವೃದ್ಧಿ ಶಾಖೆ ಹಾಗೂ ಸ್ಥಳೀಯ ಆಡಳಿತ ಶಾಖೆ) (ವೃಂದ ಮತ್ತು ನೇಮಕಾತಿ) ನಿಯಮಗಳು, 2008ಕ್ಕೆ ಕರ್ನಾಟಕ ಸರ್ಕಾರವು ತಿದ್ದುಪಡಿ ಮಾಡಲು ಪ್ರಸ್ತಾವಿಸಿದ್ದು, ಕರ್ನಾಟಕ ರಾಜ್ಯ ಸಿವಿಲ್ ಸೇವಾ ಅಧಿನಿಯಮ 1978 (1990ರ ಕರ್ನಾಟಕ ಅಧಿನಿಯಮ ಸಂಖ್ಯೆ:14)ರ ಪ್ರಕರಣ 8ರ ಸಹವಾಚನದೊಂದಿಗೆ 3ನೇ ಪ್ರಕರಣದ (1)ನೇ ಉಪ ಪ್ರಕರಣದಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಸದರಿ ಅಧಿನಿಯಮದ 3ನೇ ಪ್ರಕರಣದ (2)ನೇ ಉಪ ಪ್ರಕರಣದ ಖಂಡ (ಎ)ರಲ್ಲಿ ಅಗತ್ಯಪಡಿಸಲಾದಂತೆ, ಇದರಿಂದ ಬಾಧಿತರಾಗಬಹುದಾದಂತಹ ಎಲ್ಲಾ ವ್ಯಕ್ತಿಗಳ ಮಾಹಿತಿಗಾಗಿ ಕರಡನ್ನು ಪ್ರಕಟಿಸಲಾಗಿದ್ದು, ಸದರಿ ಕರಡು ನಿಯಮಗಳನ್ನು ಅಧಿಕೃತ ರಾಜ್ಯ ಪತ್ರದಲ್ಲಿ ಪ್ರಕಟವಾದ 15 ದಿನಗಳ ಅವಧಿಯ ನಂತರ, ಪರಿಗಣನೆಗೆ ತೆಗೆದುಕೊಳ್ಳಲಾಗುವುದೆಂದು ಈ ಮೂಲಕ ತಿಳಿಸಿದೆ.

ಸದರಿ ಕರಡು ನಿಯಮಗಳ ಬಗ್ಗೆ ರಾಜ್ಯ ಸರ್ಕಾರವು ಯಾವುದೇ ವ್ಯಕ್ತಿಯಿಂದ ಆಕ್ಷೇಪಣೆ ಅಥವಾ ಸಲಹೆಗಳನ್ನು ಮೇಲೆ ನಿಗದಿಪಡಿಸಿದ ಅವಧಿಯೊಳಗೆ ಸ್ವೀಕರಿಸಿದಲ್ಲಿ ಅವುಗಳನ್ನು ರಾಜ್ಯ ಸರ್ಕಾರವು ಪರಿಶೀಲಿಸುವುದು. ಆಕ್ಷೇಪಣೆಗಳು ಹಾಗೂ ಸಲಹೆಗಳನ್ನು ಸರ್ಕಾರದ ಪ್ರಧಾನ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಕರ್ನಾಟಕ ಸರ್ಕಾರ, ಬಹುಮಹಡಿಗಳ ಕಟ್ಟಡ, ಬೆಂಗಳೂರು-560 001, ಈ ವಿಳಾಸಕ್ಕೆ ಕಳುಹಿಸಬಹುದಾಗಿದೆ.

### ಕರಡು ನಿಯಮಗಳು

**1. ಶೀರ್ಷಿಕೆ ಮತ್ತು ಪ್ರಾರಂಭ:-** (1) ಈ ನಿಯಮಗಳನ್ನು ಕರ್ನಾಟಕ ಸಾಮಾನ್ಯ ಸೇವೆ (ಅಭಿವೃದ್ಧಿ ಶಾಖೆ ಹಾಗೂ ಸ್ಥಳೀಯ ಆಡಳಿತ ಶಾಖೆ) (ವೃಂದ ಮತ್ತು ನೇಮಕಾತಿ) (ತಿದ್ದುಪಡಿ) ನಿಯಮಗಳು, 2014 ಎಂದು ಕರೆಯತಕ್ಕದ್ದು.

(2) ಈ ನಿಯಮಗಳು ಅಧಿಕೃತ ರಾಜ್ಯಪತ್ರದಲ್ಲಿ ಪ್ರಕಟವಾದ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

**2. ಅನುಸೂಚಿಯ ತಿದ್ದುಪಡಿ:-** ಕರ್ನಾಟಕ ಸಾಮಾನ್ಯ ಸೇವೆ (ಅಭಿವೃದ್ಧಿ ಶಾಖೆ ಹಾಗೂ ಸ್ಥಳೀಯ ಆಡಳಿತ ಶಾಖೆ) (ವೃಂದ ಮತ್ತು ನೇಮಕಾತಿ) ನಿಯಮಗಳು, 2008ರ ಅನುಸೂಚಿಯಲ್ಲಿ;-

(1) ಕ್ರಮ ಸಂಖ್ಯೆ: 4ರಲ್ಲಿನ ಉಪ ಕಾರ್ಯದರ್ಶಿ, ಪಂಚಾಯತ್ ರಾಜ್ (ಹಿರಿಯ ಶ್ರೇಣಿ) ವರ್ಗದ ಹುದ್ದೆಯ ಅಂಕಣ: 5ರಲ್ಲಿ ಕೆಳಕಂಡಂತೆ ಅಳವಡಿಸಿಕೊಳ್ಳತಕ್ಕದ್ದು, ಅದೇನೆಂದರೆ;-

"ಮುಂಬಡ್ತಿಗಾಗಿ: ಕಾರ್ಯನಿರ್ವಾಹಕ ಅಧಿಕಾರಿ, ಪಂಚಾಯತ್ ರಾಜ್/ ಸಹಾಯಕ ಕಾರ್ಯದರ್ಶಿ, ಪಂಚಾಯತ್ ರಾಜ್ ಹುದ್ದೆಯಲ್ಲಿ ಕನಿಷ್ಠ 3 ವರ್ಷಗಳಿಗೆ ಕಡಿಮೆ ಇಲ್ಲದಂತೆ ಸೇವೆ ಸಲ್ಲಿಸಿರತಕ್ಕದ್ದು.

"ಪರಂತು, ಕರ್ನಾಟಕ ಸಾಮಾನ್ಯ ಸೇವೆ (ಅಭಿವೃದ್ಧಿ ಶಾಖೆ ಹಾಗೂ ಸ್ಥಳೀಯ ಆಡಳಿತ ಶಾಖೆ) (ವೃಂದ ಮತ್ತು ನೇಮಕಾತಿ) (ತಿದ್ದುಪಡಿ) ನಿಯಮಗಳು, 2014 ಜಾರಿಗೆ ಬಂದ ಒಂದು ವರ್ಷದ ಅವಧಿಯವರೆಗೆ, 3 ವರ್ಷಗಳಿಗೆ ಕಡಿಮೆ ಇಲ್ಲದಂತೆ ಸೇವೆ ಸಲ್ಲಿಸಿದ

ಅರ್ಹ ವ್ಯಕ್ತಿ ಲಭ್ಯವಿಲ್ಲದಿದ್ದ ಪಕ್ಷದಲ್ಲಿ ಒಂದು ವರ್ಷಕ್ಕಿಂತ ಕಡಿಮೆ ಇಲ್ಲದಂತೆ ಸೇವೆ ಸಲ್ಲಿಸಿರುವ ವ್ಯಕ್ತಿಯನ್ನು ಪರಿಗಣಿಸಬಹುದಾಗಿದೆ."

(2) ಕ್ರಮಸಂಖ್ಯೆ: 8ರ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯ ಅಂಕಣ 4ರಲ್ಲಿ ಕೆಳಕಂಡಂತೆ ಅಳವಡಿಸಿಕೊಳ್ಳುವುದು.

(ಎ) ಕರ್ನಾಟಕ ನಾಗರೀಕ ಸೇವೆ(ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ನೇರ ನೇಮಕಾತಿ ಮತ್ತು ಆಯ್ಕೆ) (ಸಾಮಾನ್ಯ) ನಿಯಮಗಳು, 2006ರಂತೆ ಶೇ.65ರಷ್ಟು ನೇರ ನೇಮಕಾತಿಯಿಂದ:

ಪರಂತು ಆಯ್ಕೆಯು ಸ್ಪರ್ಧಾತ್ಮಕ ಪರೀಕ್ಷೆಯಲ್ಲಿನ ಮೆರಿಟ್ ಆಧಾರದ ಮೇಲೆ ಮಾತ್ರ ಇರತಕ್ಕದ್ದು ಮತ್ತು ಸಂದರ್ಶನ ಇರತಕ್ಕದ್ದಲ್ಲ;

ಗ್ರಾಮ ಪಂಚಾಯಿತಿ ಕಾರ್ಯದರ್ಶಿ ಮತ್ತು ಗ್ರಾಮೀಣಾಭಿವೃದ್ಧಿ ಸಹಾಯಕ (ಗ್ರೇಡ್–1) ವೃಂದದಿಂದ ಶೇ.35ರಷ್ಟು ಮುಂಬಡ್ತಿ ಮೂಲಕ;

(ಬಿ) ಅಂಕಣ (5)ರ ಶೀರ್ಷಿಕೆ **"ಮುಂಬಡ್ತಿಗಾಗಿ"** ಅಡಿಯಲ್ಲಿ ಕೆಳಕಂಡಂತೆ ಅಳವಡಿಸುವುದು.

"ಗ್ರಾಮ ಪಂಚಾಯಿತಿ ಕಾರ್ಯದರ್ಶಿ ಮತ್ತು ಗ್ರಾಮೀಣಾಭಿವೃದ್ಧಿ ಸಹಾಯಕ (ಗ್ರೇಡ್–1) ಹುದ್ದೆಯಲ್ಲಿ 3 ವರ್ಷಗಳಿಗೆ ಕಡಿಮೆ ಇಲ್ಲದಂತೆ ಸೇವೆ ಸಲ್ಲಿಸಿರತಕ್ಕದ್ದು.

ಪರಂತು, ಕರ್ನಾಟಕ ಸಾಮಾನ್ಯ ಸೇವೆ (ಅಭಿವೃದ್ಧಿ ಶಾಖೆ ಹಾಗೂ ಸ್ಥಳೀಯ ಆಡಳಿತ ಶಾಖೆ) (ವೃಂದ ಮತ್ತು ನೇಮಕಾತಿ) (ತಿದ್ದುಪಡಿ) ನಿಯಮಗಳು, 2014 ಜಾರಿಗೆ ಬಂದ ಒಂದು ವರ್ಷದ ಅವಧಿಯವರೆಗೆ, 3 ವರ್ಷಗಳಿಗೆ ಕಡಿಮೆ ಇಲ್ಲದಂತೆ ಸೇವೆ ಸಲ್ಲಿಸಿದ ವ್ಯಕ್ತಿ ಲಭ್ಯವಿಲ್ಲದಿದ್ದ ಪಕ್ಷದಲ್ಲಿ 2 ವರ್ಷಗಳಿಗೆ ಕಡಿಮೆ ಇಲ್ಲದಂತೆ ಸೇವೆ ಸಲ್ಲಿಸಿದ ವ್ಯಕ್ತಿಯನ್ನು ಪರಿಗಣಿಸಬಹುದಾಗಿದೆ."

(3) ಕ್ರಮಸಂಖ್ಯೆ:9ರಲ್ಲಿನ ಗ್ರಾಮ ಪಂಚಾಯಿತಿ ಕಾರ್ಯದರ್ಶಿ ಮತ್ತು ಗ್ರಾಮೀಣಾಭಿವೃದ್ಧಿ ಸಹಾಯಕ (ಗ್ರೇಡ್–1):–

(ಎ) ಅಂಕಣ (4)ರಲ್ಲಿನ "ಕರ್ನಾಟಕ ನಾಗರೀಕ ಸೇವೆಗಳು (ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ನೇರ ನೇಮಕಾತಿ ಮತ್ತು ಆಯ್ಕೆ) (ಸಾಮಾನ್ಯ) ನಿಯಮಗಳು, 2006" ಪದಗಳ ನಂತರ ಈ ಕೆಳಕಂಡ ಪರಂತುಕವನ್ನು ಸೇರಿಸತಕ್ಕದ್ದು.

"ಪರಂತು ಆಯ್ಕೆಯು ಸ್ಪರ್ಧಾತ್ಮಕ ಪರೀಕ್ಷೆಯಲ್ಲಿನ ಮೆರಿಟ್ ಆಧಾರದಲ್ಲಿ ಮಾತ್ರ ಇರತಕ್ಕದ್ದು ಮತ್ತು ಸಂದರ್ಶನ ಇರತಕ್ಕದ್ದಲ್ಲ."

(ಬಿ) ಅಂಕಣ (5)ರಲ್ಲಿನ ಶೀರ್ಷಿಕೆ **"ಮುಂಬಡ್ತಿಗಾಗಿ"** ಅಡಿಯಲ್ಲಿನ ನಮೂದುಗಳ ಬದಲಾಗಿ ಈ ಕೆಳಕಂಡಂತೆ ಅಳವಡಿಸಿಕೊಳ್ಳುವುದು, ಅದೇನೆಂದರೆ;

"ಗ್ರಾಮ ಪಂಚಾಯಿತಿ ಕಾರ್ಯದರ್ಶಿ ಮತ್ತು ಗ್ರಾಮೀಣಾಭಿವೃದ್ಧಿ ಸಹಾಯಕ (ಗ್ರೇಡ್–2) ವೃಂದದಲ್ಲಿ 3 ವರ್ಷಗಳಿಗೆ ಕಡಿಮೆ ಇಲ್ಲದಂತೆ ಸೇವೆ ಸಲ್ಲಿಸಿರತಕ್ಕದ್ದು;

ಪರಂತು, ಕರ್ನಾಟಕ ಸಾಮಾನ್ಯ ಸೇವೆ (ಅಭಿವೃದ್ಧಿ ಶಾಖೆ ಹಾಗೂ ಸ್ಥಳೀಯ ಆಡಳಿತ ಶಾಖೆ) (ವೃಂದ ಮತ್ತು ನೇಮಕಾತಿ) (ತಿದ್ದುಪಡಿ) ನಿಯಮಗಳು, 2014 ಜಾರಿಗೆ ಬಂದ ಒಂದು ವರ್ಷದ ಅವಧಿಯವರೆಗೆ, 3 ವರ್ಷಗಳಿಗೆ ಕಡಿಮೆ ಇಲ್ಲದಂತೆ ಸೇವೆ ಸಲ್ಲಿಸಿದ ವ್ಯಕ್ತಿ ಲಭ್ಯವಿಲ್ಲದಿದ್ದ ಪಕ್ಷದಲ್ಲಿ 2 ವರ್ಷಗಳಿಗೆ ಕಡಿಮೆ ಇಲ್ಲದಂತೆ ಸೇವೆ ಸಲ್ಲಿಸಿದ ವ್ಯಕ್ತಿಯನ್ನು ಪರಿಗಣಿಸಬಹುದಾಗಿದೆ."

4) ಕ್ರಮಸಂಖ್ಯೆ: 10ರಲ್ಲಿನ ಗ್ರಾಮ ಪಂಚಾಯಿತಿ ಕಾರ್ಯದರ್ಶಿ ಮತ್ತು ಗ್ರಾಮೀಣಾಭಿವೃದ್ಧಿ ಸಹಾಯಕ (ಗ್ರೇಡ್–2)ರ ಅಂಕಣ (4)ರಲ್ಲಿನ "ಕರ್ನಾಟಕ ನಾಗರೀಕ ಸೇವೆಗಳು (ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ನೇರ ನೇಮಕಾತಿ ಮತ್ತು ಆಯ್ಕೆ) (ಸಾಮಾನ್ಯ) ನಿಯಮಗಳು, 2006" ಪದಗಳ ನಂತರ ಈ ಕೆಳಕಂಡ ಪರಂತುಕವನ್ನು ಸೇರಿಸತಕ್ಕದ್ದು.

"ಪರಂತು ಆಯ್ಕೆಯು ಸ್ಪರ್ಧಾತ್ಮಕ ಪರೀಕ್ಷೆಯಲ್ಲಿನ ಮೆರಿಟ್ ಆಧಾರದಲ್ಲಿ ಮಾತ್ರ ಇರತಕ್ಕದ್ದು ಮತ್ತು ಸಂದರ್ಶನ ಇರತಕ್ಕದ್ದಲ್ಲ."

5) ಕ್ರಮಸಂಖ್ಯೆ: 10–ಎ ರಲ್ಲಿನ ದ್ವಿತೀಯ ದರ್ಜೆ ಲೆಕ್ಕ ಸಹಾಯಕರ ಅಂಕಣ (4)ರಲ್ಲಿನ "ಕರ್ನಾಟಕ ನಾಗರೀಕ ಸೇವೆಗಳು (ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ನೇರ ನೇಮಕಾತಿ ಮತ್ತು ಆಯ್ಕೆ) (ಸಾಮಾನ್ಯ) ನಿಯಮಗಳು, 2006" ಪದಗಳ ನಂತರ ಈ ಕೆಳಕಂಡ ಪರಂತುಕವನ್ನು ಸೇರಿಸತಕ್ಕದ್ದು.

"ಪರಂತು ಆಯ್ಕೆಯು ಸ್ಪರ್ಧಾತ್ಮಕ ಪರೀಕ್ಷೆಯಲ್ಲಿನ ಮೆರಿಟ್ ಆಧಾರದಲ್ಲಿ ಮಾತ್ರ ಇರತಕ್ಕದ್ದು ಮತ್ತು ಸಂದರ್ಶನ ಇರತಕ್ಕದ್ದಲ್ಲ."

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಚಂದ್ರಶೇಖರ್
ಸರ್ಕಾರದ ಅಧೀನ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

**RURAL DEVELOPMENT AND PANCHAYAT RAJ SECRETARIAT**

**NOTIFICATION**

**No: RDP 299 PBV 2013, Bangalore, dated: 30-01-2014**

The draft of the following rules further to amend the Karnataka General Service (Development Branch and Local Government Branch) (Cadre and Recruitment) Rules, 2008, which the Government of Karnataka proposes to make in exercise of the powers conferred by sub-section (1) of section 3 read with section 8 of the Karnataka State Civil Service Act, 1978 (Karnataka Act 14 of 1990) is hereby published as required by clause (a) of sub-section (2) of section 3 of the said Act, for the information of all persons likely to be affected thereby and notice is hereby given that the said draft will be taken into consideration after fifteen days from the date of its publication in the Official Gazette.

Any objection and suggestion which may be received by the State Government from any person with respect to the said draft rules before the expiry of the period specified above will be considered by the State Government. Objections and suggestions may be addressed to the Principal Secretary to Government, Rural Development and Panchayat Raj Department, M.S. Building, Dr. B.R.Ambedkar Veedi, Bangalore-1.

**DRAFT RULES**

1. **Title and commencement**:- (1) These rules may be called the Karnataka General Service (Development Branch and Local Government Branch) (Cadre and Recruitment) (Amendment) Rules, 2014.

(2) They shall come into force from the date of their publication in the Official Gazette.

**2. Amendment of the Schedule :-** In the Karnataka General Services (Development Branch and Local Government Branch) (Cadre and Recruitment) Rules, 2008, in the schedule, in the entries relating to the category of post of,-

(i) "Deputy Secretary, Panchayat Raj (Senior Scale)" at serial number 4, for the entries in column (5), the following shall be substituted, namely:-

**"For promotion.-** Must have put in a service of not less than three years in the cadre of Executive Officer, Panchayat Raj/ Assistant Secretary, Panchayat Raj.

Provided that for a period of one year from the date of commencement of Karnataka General Service (Development Branch and Local Government Branch) (Cadre and Recruitment) (Amendment) Rules, 2014, if a person who has put in a service of not less than three years is not available, a person who has put in a service of not less than one year may be considered for promotion".

(ii) Panchayat Development Officer at serial number 8, for the entries in column no.(4), the following shall be substituted, namely:-

(a) "Sixty five percent by direct recruitment in accordance with the Karnataka Civil Services (Direct Recruitment by Competitive Examinations and Selection) (General) Rules, 2006:

Provided that the selection shall be based on merit in the competitive examination only and there shall be no interview.

Thirty five percent by promotion from the cadre of Grama Panchayat Secretary and Rural Development Assistant (Grade-1)."

(b) In column (5), for the entries under the heading "For promotion" the following shall be substituted namely:-

"Must have put in a service of not less than three years in the cadre of Grama Panchayat Secretary and Rural Development Assistant (Grade-I):

Provided that for a period of one year from the date of commencement of Karnataka General Service (Development Branch and Local

Government Branch) (Cadre and Recruitment) (Amendment) Rules, 2014, if a person who has put in a service of not less than three years is not available, a person who has put in a service of not less than two years may be considered for promotion".

(iii) Grama Panchayat Secretary and Rural Development Assistant (Grade-I) at serial number 9,-

(a) in column (4), after the words "Karnataka Civil Services (Direct Recruitment by Competitive Examination and Selection) (General) Rules, 2006" the following proviso, shall be inserted namely:-

"Provided that the selection shall be based on merit in the Competitive Examination only and there shall be no interview".

(b) in column (5), for the entries under the heading **"For promotion"** the following shall be substituted namely:-

"Must have put in a service of not less than three years in the cadre of Grama Panchayat Secretary and Rural Development Assistant (Grade-II):

Provided that for a period of one year from the date of commencement of Karnataka General Service (Development Branch and Local Government Branch) (Cadre and Recruitment) (Amendment) Rules, 2014, if a person who has put in a service of not less than three years is not available, a person who has put in a service of not less than two years may be considered for promotion".

(iv) Grama Panchayat Secretary and Rural Development Assistant (Grade-II) at serial number 10, in column (4), after the words "Karnataka Civil Services (Direct Recruitment by Competitive Examination and Selection) (General) Rules, 2006" the following proviso shall be inserted namely:-

"Provided that the selection shall be based on merit in the competitive examination only and there shall be no interview."

(v) Second Division Accounts Assistant at serial number 10-A, in column (4), after the words "Karnataka Civil Services (Direct Recruitment by Competitive Examination and Selection) (General) Rules, 2006" the following proviso shall be inserted namely:-

"Provided that the selection shall be based on merit in the competitive examination only and there shall be no interview."

By Order and in the name of the Governor of Karnataka,

**CHANDRASHEKHAR**
Under Secretary to Government
Rural Development & Panchayat Raj Department

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು. (ಪಿ7) (300 ಪ್ರತಿಗಳು)